5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಶಿವಮೊಗ್ಗ
(ಪೀಠಾಸೀನ, ಸಾಗರ)

ಎಸ್.ಸಿ. ಸಂಃ10038/2021

ಪಿಡಬ್ಲ್ಯೂ 02
ಸಿಡಬ್ಲ್ಯೂ 03

| | | |
|---|---|---|
| ಸಾಕ್ಷಿ ಹೆಸರು | - | ಪ್ರವೀಣ್ |
| ತಂದೆ ಹೆಸರು | - | ಗೋಪಾಲಪ್ಪ |
| ವಯಸ್ಸು | - | 34 ವರ್ಷ |
| ಉದ್ಯೋಗ | - | ವ್ಯವಸಾಯ |
| ವಿಳಾಸಃ | - | ಸಾರೇಕೊಪ್ಪ, ಸೊರಬ ತಾಲ್ಲೂಕು. |

ಪ್ರಮಾಣ ವಚನ ಭೋದಿಸಿದ ದಿನಾಂಕಃ 25-07-2022.

<u>ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ</u>

ಆರೋಪಿತರು ನನಗೆ ಗೊತ್ತು. ನನಗೆ ಪ್ರಾ.ಸಾ -1 , ಚಾಸಾ 2, ಚಾಸಾ-4 ರಿಂದ ಚಾಸಾ-11 ರವರು ಗೊತ್ತು . ನಾನು ಸಾರೇಕೊಪ್ಪ ಗ್ರಾಮದಲ್ಲಿ ಕೃಷಿ ಕೆಲಸ ಮಾಡುತ್ತೇನೆ. ಆರೋಪಿತರು ಮತ್ತು ಪ್ರಾಸಾ-1 ಮತ್ತು ಚಾಸಾ-2 ರವರ ನಡುವೆ ಗಲಾಟೆಯಾದ ಬಗ್ಗೆ ನನಗೆ ಗೊತ್ತು.

ದಿನಾಂಕಃ09-06-2019 ರಂದು ಸಾಯಂಕಾಲ 7-30 ಗಂಟೆ ಸಮಯದಲ್ಲಿ ನಾನು ನಮ್ಮ ಊರು ಸಾರೇಕೊಪ್ಪದಿಂದ ಸೊರಬ ತಾಲ್ಲೂಕು ಕೊರಕೋಡು ಗ್ರಾಮಕ್ಕೆ ನನ್ನ ಹೆಂಡತಿಯ ಊರಿಗೆ ಕಾರಿನಲ್ಲಿ ಹೋಗುತ್ತಿದ್ದೆ. ನಾನು ಹೋಗುತ್ತಿರುವಾಗ ಸಾರೇಕೊಪ್ಪದ ಹುಣಸೇಕೊಪ್ಪದ ಮಂಜುನಾಥರವರ ಮನೆಯ ಎದುರು ರಸ್ತೆಯಲ್ಲಿ ಜನ ಸೇರಿದ್ದರು. ಆ ಸಮಯದಲ್ಲಿ ಮಾತಿಗೆ ಮಾತು ಆಗಿ ಗಲಾಟೆ ಆಗುತ್ತಿತ್ತು. ಅಲ್ಲಿ ತುಂಬಾ ಜನ ಸೇರಿದ್ದರು. ಯಾರು ಯಾರ ನಡುವೆ ಮಾತುಕತೆಯಾಗಿ ಜಗಳ ಆಗುತ್ತಿತ್ತು ಎಂದು ತುಂಬಾ ಜನ ಇದ್ದ ಕಾರಣ ನನಗೆ ಗೊತ್ತಿಲ್ಲ.

ಪ್ರಾ.ಸಾ-1 ಮತ್ತು ಚಾಸಾ-2 ರವರು ಅಲ್ಲೇ ಸ್ಥಳದಲ್ಲಿ ಇದ್ದು ಅವರನ್ನು ನಾನು ಮನೆಗೆ ಕಳಿಸಿರುತ್ತೇನೆ. ಪ್ರಾ.ಸಾ-1 ಮತ್ತು ಚಾಸಾ-2 ರವನ್ನು ಗಲಾಟೆ ಬಿಡಿಸಿ ನಾನು ಮನೆಗೆ ಕಳಿಸಿದಾಗ

ಅವರಿಗೆ ಏನೂ ಆಗಿರಲಿಲ್ಲ ಚೆನ್ನಾಗೇ ಇದ್ದರು. ನಾನು ನೋಡಿದಾಗ ಪ್ರಾ.ಸಾ-1 ಮತ್ತು ಚಾಸಾ-2 ರವರು ರಸ್ತೆಯ ಮೇಲೆ ನಿಂತಿದ್ದರು, ಅವರನ್ನು ನಾನು ಮನೆಗೆ ಕರೆದುಕೊಂಡು ಹೋಗಿರುತ್ತೇನೆ. ಆ ಸಮಯದಲ್ಲಿ ನಾನಲ್ಲದೇ ಸ್ಥಳದಲ್ಲಿ ಚಾಸಾ -5 ಪ್ರಭಾಕರ ಇದ್ದರು. ನಾನು ಜಗಳ ಬಿಡಿಸಿದಾಗ ಪ್ರಾ.ಸಾ-1 ಮತ್ತು ಚಾಸಾ-2 ರವರೊಂದಿಗೆ ಜಗಳ ಮಾಡಿದವರು ಕೆಟ್ಟದಾಗಿ ಬೈದುಕೊಳ್ಳುತ್ತಿದ್ದರು, ಅವರು ಏನು ಹೇಳಿದರು ಎಂದು ನನಗೆ ಗೊತ್ತಿಲ್ಲ. ಅಲ್ಲಿ ಸೇರಿದ ಜನರ ಕೈಯ್ಯಲ್ಲಿ ಕಲ್ಲುಗಳು ಮತ್ತುದೊಣ್ಣೆ ಇದ್ದವು. ಯಾರ್ಯಾರ ಕೈಯಲ್ಲಿ ಕಲ್ಲು ಮತ್ತು ಯಾರ್ಯಾರ ಕೈಯಲ್ಲಿ ದೊಣ್ಣೆಗಳು ಇದ್ದವು ಎಂದು ನನಗೆ ಗೊತ್ತಿಲ್ಲ. ಸದರಿ ದೊಣ್ಣೆ ಮತ್ತು ಕಲ್ಲುಗಳಿಂದ ಯಾರು ಏನೇನು ಮಾಡಿದರು ಎಂದು ನಾನು ನೋಡಲಿಲ್ಲ.

ಪ್ರಾ.ಸಾ-1 ಮತ್ತು ಚಾಸಾ-2 ರವರು ತಮಗೆ ಹೊಡೆತ ಬಿದ್ದಿದ್ದರಿಂದ ಸೊರಬ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿರುತ್ತಾರೆ. ಚಾಸಾ-2 ರವರಿಗೆ ತಲೆಗೆ ಗಾಯ ಆಗಿತ್ತು, ಪ್ರಾಸಾ-1 ರವರಿಗೆ ತಲೆಗೆ ಪೆಟ್ಟಾಗಿತ್ತು. ಅವರ ತಲೆಗೆ ಸದರಿ ಪೆಟ್ಟುಗಳು ಹೇಗಾಯಿತು ಎಂದು ನನಗೆ ಗೊತ್ತಿಲ್ಲ. ಜಮೀನು ವಿಚಾರದಲ್ಲಿ ಗಲಾಟೆಯಾಗಿತ್ತು ಎಂದು ಗೊತ್ತಾಯಿತು. ಪ್ರಾ.ಸಾ-1 ರವರ ತೋಟಕ್ಕೆ ಬೆಂಕಿ ಹಾಕಿ ಸದರಿ ತೋಟ ಸುಟ್ಟಿದ್ದ ವಿಚಾರದಲ್ಲಿ ಗಲಾಟೆಯಾಗಿತ್ತು ಎಂದು ಗೊತ್ತಾಯಿತು.

ದಿನಾಂಕಃ11-06-2019 ರಂದು ಘಟನಾ ಸ್ಥಳಕ್ಕೆ ಪೋಲೀಸರು ಬಂದಿದ್ದರು. ಪೋಲೀಸರಿಗೆ ಘಟನಾ ಸ್ಥಳವನ್ನು ಪ್ರಾ ಸಾ-1 ರವರು ತೋರಿಸಿರುತ್ತಾರೆ. ಆ ಸಮಯದಲ್ಲಿ ನಾನು, ಪ್ರಾ.ಸಾ-1 , ಚಾಸಾ-4 ರವರು ಇದ್ದೆವು. ಸ್ಥಳದಲ್ಲಿ 2 ಕಲ್ಲುಗಳು ಮತ್ತು ಒಂದು ದೊಣ್ಣೆ ಇದ್ದವು. ಪೋಲೀಸರು ಅವುಗಳನ್ನು ತಮ್ಮ ವಶಕ್ಕೆ ಪಡೆದಿರುತ್ತಾರೆ. ಪೋಲೀಸರು ಆ ಬಗ್ಗೆ ಪರಿಶೀಲನೆ ಮಾಡಿದರು. ಆ ಸಮಯದಲ್ಲಿ ಒಂದು ದಾಖಲೆಗೆ ನನ್ನ ಸಹಿಯನ್ನು ಪಡೆದು ಪೋಲೀಸರು ಸ್ಥಳದಲ್ಲಿ ಫೋಟೋವನ್ನು ತೆಗೆಸಿರುತ್ತಾರೆ. ಸದರಿ ದಾಖಲೆಯು ಮಹಜರ್ ಆಗಿದ್ದು ಅದನ್ನು ಈಗಾಗಲೇ ನಿಪಿ -2 ಎಂದು ಗುರುತಿಸಲಾಗಿದೆ. ನನ್ನ ಸಹಿಯನ್ನು ನಿಪಿ -2(ಬಿ) ಎಂದು ಗುರುತಿಸಲಾಂಲಯಿತು. ಫೋಟೋಗಳನ್ನು ಈಗ ನೋಡುತ್ತಿದ್ದು ಅವುಗಳನ್ನು ಈಗಾಗಲೇ ನಿಪಿ -3

ಮತ್ತು 4 ಎಂದು ಗುರುತಿಸಲಾಗಿದೆ. ಆ ದಿನ ಪೋಲೀಸರು ವಶಪಡಿಸಿಕೊಂಡಿದ್ದ 2 ಕಲ್ಲುಗಳು ಮತ್ತು ದೊಣ್ಣೆಯನ್ನು ನೋಡಿ ಗುರುತಿಸಿದ್ದೇನೆ. ಅವುಗಳನ್ನು ಈಗಾಗಲೇ ಮು ಮಾ -1 ರಿಂದ ಮು ಮಾ 3 ಎಂದು ಗುರುತಿಸಲಾಗಿದೆ. ಈ ಬಗ್ಗೆ ಪೋಲೀಸರು ನನ್ನನ್ನು ವಿಚಾರಣೆ ಮಾಡಿ ನನ್ನ ಹೇಳಿಕೆ ಪಡೆದುಕೊಂಡಿರುತ್ತಾರೆ.

(ಮಾನ್ಯ ಸ.ಅ.ರವರು ಸದರಿ ಭಾಗಶಃ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸುವಂತೆ ಕೋರಿದ್ದು, ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲಾಯಿತು)

ಪಾಟೀ ಸವಾಲುಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ

ಹುಣಸೇಕೊಪ್ಪದ ಮಂಜುನಾಥನ ಮನೆಯ ಹತ್ತಿರ ಹೋಗಿ ನೋಡಿದಾಗ ನಮ್ಮ ಗ್ರಾಮದ ಮಳ್ಳಿ ಕುಟುಂಬದವರಾದ ನ್ಯಾಯಾಲಯದ ಮುಂದಿರುವ 1 ರಿಂದ 9 ನೇ ಆರೋಪಿತರು ದೊಣ್ಣೆ ಮತ್ತು  ಕಲ್ಲುಗಳನ್ನು ಹಿಡಿದುಕೊಂಡು , ಅಕ್ರಮ ಕೂಟ ಕಟ್ಟಿಕೊಂಡು ಪ್ರಾ.ಸಾ-1 ಮತ್ತು ಚಾಸಾ2 ರವರನ್ನು ಕೊಲೆ ಮಾಡುವ ಉದ್ದೇಶದಿಂದ ಅವರನ್ನು ಅಡ್ಡಗಟ್ಟಿ ಅವರಿಗೆ ಏನ್ರೋ ಸೂಳೇ ಮಕ್ಕಳಾ ನಿಮ್ಮ ತಾಯಿನ ಹಡ ನಮ್ಮ ನಮನೆತನದವರನ್ನು ವಿರುದ್ದ ಹಾಕಿಕೊಂಡು ಊರಿನಲ್ಲಿ ಹೇಗೆ ಜೀನ ಮಾಡುತ್ತೀರಾ ಎಂದು ಅವಾಚ್ಯವಾಗಿ ಬೈಯ್ಯುತ್ತ ನಿಮ್ಮನ್ನು ನಾವು ನೋಡಿಕೊಳ್ಳುತ್ತೇವೆ ಅಂತ ಕೂಗುತ್ತಿದ್ದರು ಎಂದರೆ ಬೈದುಕೊಳ್ಳುತಿದ್ದರು ಆದರೆ ನಾನು ಕೇಳಿಸಿಕೊಂಡಿಲ್ಲ.

ಅದೇ ಸಮಯಕ್ಕೆ ಮಳ್ಳಿ ರಮೇಶ ತನ್ನ ಕೈಯ್ಯಲ್ಲಿದ್ದ ಕಲ್ಲಿನಿಂದ ಸತೀಶನ ತಲೆಗೆ ಹೊಡೆದು ರಕ್ತಗಾಯಪಡಿಸಿದ್ದು ಮೈಕೈಗೆ ಹೊಡೆದು ರಕ್ತಗಾಯಪಡಿಸಿದ್ದು ಇದರ ಪರಿಣಾಮ ಸತೀಶ ಸ್ಥಳದಲ್ಲಿ ಕುಸಿದು ಬಿದ್ದಾಗ ಮಳ್ಳಿ ರಾಜಪ್ಪ ಮಳ್ಳಿ ಪರಸಪ್ಪ , ಮಳ್ಳಿ ಅಣ್ಣಪ್ಪ ಮತ್ತು ಇತರೆಯವರು ಕೈಯಿಂ ದಸತೀಶನ ಮೈಕೈಗೆಹೊಡೆದು ಒಳಪೆಟ್ಟು ಮಾಡಿದದ್ದಲ್ಲದೇ ಕಾಲಿನಿಂದ ಒದ್ದು ಎಲ್ಲರೂ ಸೇರಿ ಮಾರಣಾಂತಿಕ ಹಲ್ಲೆ ಮಾಡಿ ಬಲವಾದ ರಕ್ತಗಾಯ ಮಾಡಿರುತ್ತಾರೆ ಎಂದರೆ ನಾನು ನೋಡಿಲ್ಲ.

ನಂತರ ಮಳ್ಳಿ ಲಿಂಗರಾಜನು ಚೇತನ್ ನ ಎರಡು ಕೈಗಳನ್ನು ಹಿಡಿದುಕೊಂಡಾಗ ಮಳ್ಳಿ ಲೋಕೇಶನು ತನ್ನ ಕೈಯ್ಯಲ್ಲಿದ್ದ ದೊಣ್ಣೆಯಿಂದ ಚೇತನನ ಹಿಂದಲೆಗೆ ಹೊಡೆದು ಒಳಪೆಟ್ಟು ಮಾಡಿದ್ದರಿಂದ ಚೇತನನು ಕೆಳಗೆ ಬಿದ್ದನು ಎಂದರೆ ನಾನು ನೋಡಿಲ್ಲ. ಆಗ ಚೇತನ್ ನ ಹಣೆಯ ಬಲಭಾಗದ ಮೇಲೆ ಮಳ್ಳಿ ಟಾಕಪ್ಪ ಈತನು ತನ್ನ ಕೈಯ್ಯಲ್ಲಿ ಹಿಡಿದುಕೊಂಡಿದ್ದ ಕಲ್ಲಿನಿಂದ ಹೊಡೆದು ರಕ್ತಗಾಯಪಡಿಸಿದನು ಎಂದರೆ ನಾನು ನೋಡಿಲ್ಲ.

ಆಗ ನಾನು, ರೆಡ್ಡಿ ಪ್ರಭಾಕರ , ಮಹಾದೇವ , ಮತ್ತು ಚೇತನನ ಕುಟುಂಬದವರು ಸೇರಿ ಜಗಳ ಬಿಡಿಸಿದೆವು ಎಂದರೆ ಸರಿ.

ಆಗ ಮಳ್ಳಿ ಕುಟುಂಬದವರು ಸತೀಶ ಮತ್ತು ಚೇತನನಿಗೆ ಈ ದಿನ ನೀವುಗಳು ಉಳಿದುಕೊಂಡಿದ್ದೀರಿ ಇನ್ನು ಮುಂದೆ ನಮ್ಮ ತಂಟೆಗೆ ಬಂದರೆ ನಿಮ್ಮಗಳನ್ನು ಜೀವಸಹಿತ ಬಿಡುವುದಿಲ್ಲವೆಂದು ಜೀವಬೆದರಿಕೆ ಹಾಕಿದರು ಎಂದರೆ ಸಾಕ್ಷಿಯು ಬೈದಿದ್ದನ್ನು ನಾನು ಕೇಳಲಿಲ್ಲ ಎಂದು ನುಡಿಯುತ್ತಾರೆ.

ನಾನು ಪ್ರಾ.ಸಾ-1 ಮತ್ತು ಚಾಸಾ-2 ರವನ್ನು ಉಪಚರಿಸಿ ನೋಡಿದ್ದು ಸತೀಶನಿಗೆ ಸದರಿ ಹಲ್ಲೆಯಿಂದ ತಲೆಗೆ ಬಲವಾಗಿ ಪೆಟ್ಟು ಬಿದ್ದು ರಕ್ತಗಾಯವಾಗಿದ್ದು ಹಾಗೂ ಆತನೊಂದಿಗೆ ಇದ್ದ ಆತನ ಅಣ್ಣ ಚೇತನನಿಗೂ ಸಹ ಆರೋಪಿತರು ಮೈಕೈಗೆ ಹೊಡೆದು ನೋವುಂಟು ಮಾಡಿರುವುದು ಕಂಡು ಬಂತು ಎಂದರೆ ನಾನು ನೋಡಿಲ್ಲ.

ನಾನು ಪ್ರಾ.ಸಾ-1 ಮತ್ತು ಚಾಸಾ-2 ರವರನ್ನು 108 ವಾಹನಕ್ಕೆ ಫೋನ್ ಮಾಡಿ ಕರೆಸಿ ಸದರಿ ವಾಹನದಲ್ಲಿ ಅವರ ಮನೆಯವರು ಸೊರಬ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆದುಕೊಂಡು ಹೋದರು ಎಂದರೆ ನಾನು ನೋಡಿಲ್ಲ. ನಂತರ ಹೆಚ್ಚಿನ ಚಿಕಿತ್ಸೆಗಾಗಿ ಶಿವಮೊಗ್ಗದ ಮ್ಯಾಕ್ಸ್ ಆಸ್ಪತ್ರೆಗೆ ಚಿಕಿತ್ಸೆಗೆ ದಾಖಲಿಸಿದ ಬಗ್ಗೆ ನನಗೆ ಗೊತ್ತಿಲ್ಲ. ಶಿವಮೊಗ್ಗದ ಮ್ಯಾಕ್ಸ್ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಗ ಚೇತನ್ ಆರೋಪಿತರ ವಿರುದ್ಧ ದೂರನ್ನು ಕೊಟ್ಟಿದ್ದಾನೆ ಎಂದರೆ ಕೊಟ್ಟಿದ್ದು ನಿಜ ಎಂದು ನುಡಿಯುತ್ತಾರೆ.

ನಂತರ ಘಟನೆ ಬಗ್ಗೆ ವಿಚಾರ ತಿಳಿಯಲಾಗಿ ಚೇತನನ ಮನೆಯ ಹಿತ್ತಲಿನಲ್ಲಿ ಇರುವ ತೋಟಕ್ಕೆ ಈ ಹಿಂದೆ ಹಾಕಿದ್ದ ಬೇಲಿಯನ್ನು ತೆಗೆದು ತಂತಿ ಬೇಲಿಯನ್ನು ಹಾಕಲು ರೆಡಿ

ಮಾಡಿಕೊಂಡಿದ್ದು , ಚೇತನನ ತೋಟದ ಪಕ್ಕದ ಜಮೀನುದಾರರಾದ ಮಳ್ಳಿ ರಾಜಪ್ಪ ಇವರ ದನಗಳು ತೋಟಕ್ಕೆ ಬಂದು ಹಾಳು ಮಾಡಿದ್ದರಿಂದ ಅವರನ್ನು ಕರೆದು ತೋಟಕ್ಕೆ ದನಗಳನ್ನು ಬಿಡಬೇಡಿ ಎಂದು ಹೇಳ್ದಿರಿಂದ ದಿನಾಂಕಃ 09-06-2019 ರಂದು ಚೇತನ ಮತ್ತು ಅವರ ತಮ್ಮ ಸತೀಶ ಕೆಲಸದ ಮೇಲೆ ಹೊರಗೆ ಹೋಗಿದ್ದನ್ನು ತಿಳಿದುಕೊಂಡಿದ್ದ ಮಳ್ಳಿ ರಾಜಪ್ಪ ಈತನು ಚೇತನರ ಹಿತ್ತಲಿನ ತೋಟದ ಬೇಲಿಗೆ ಬೆಂಕಿ ಹಾಕಿದ್ದರಿಂದ ಬೇಲಿ ಪಕ್ಕದ ಸುಮಾರು 30 ರಿಂದ 40 ಅಡಿಕೆ ಮತ್ತು ಬಾಳೆ ಗಿಡಗಳು ಸುಟ್ಟು ಹೋಗಿದ್ದು ಈ ವಿಚಾರವನ್ನು ಚೇತನ್ ಮತ್ತು ಅವರ ತಮ್ಮ ಸತೀಶ ಇಬ್ಬರೂ ಸೇರಿ ಮಳ್ಳಿ ರಾಜಪ್ಪರವರ ಮನೆಗೆ ಹೋಗಿ ವಿಚಾರ ಮಾಡಿಕೊಂಡು ಬರಲೆಂದು ತಮ್ಮ ಸಾರೆಕೊಪ್ಪ ಗ್ರಾಮದ ಹುಣಸೆಕೊಪ್ಪ ಮಂಜುನಾಥರವರ ಮನೆಯ ಎದುರಿನ ಟಾರ್ ರಸ್ತೆಯಲ್ಲಿ ಹೋಗುತ್ತಿರುವಾಗ ಆರೋಪಿತರು ಚೇತನ್ ಮತ್ತು ಸತೀಶ ಇಬ್ಬರನ್ನು ಕೊಲೆ ಮಾಡುವ ಉದ್ದೇಶದಿಂದ ಅಕ್ರಮ ಕೂಟ ಕಟ್ಟಿಕೊಂಡು ಕೈಯ್ಯಲ್ಲಿ ಕಲ್ಲುಗಳು ಮತ್ತುದೊಣ್ಣೆಯನ್ನು ಹಿಡಿದುಕೊಂಡು ಚೇತನ್ ಮತ್ತು ಸತೀಶ ರವರನ್ನು ಅಡ್ಡಗಟ್ಟಿ ಅವಾಚ್ಯ ಶಬ್ದಗಳಿಂದ ನಿಂದಿಸಿ ಕಲ್ಲು ಮತ್ತುದೊಣ್ಣೆಗಳಿಂದ ಹೊಡೆದು ರಕ್ತಗಾಯಪಡಿಸಿ ಜೀವ ಬೆದರಿಕೆ ಹಾಕಿರುತ್ತಾರೆ ಎಂದು ಗೊತ್ತಾಯಿತು, ಸದರಿ ಹಲ್ಲೆಯಿಂದ ಸತೀಶನು ಕೋಮ ಸ್ಥಿತಿಗೆ ಹೋಗಿದ್ದು ಚೇತರಿಸಿಕೊಳ್ಳದೇ ಇರುವುದು ಕಂಡುಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಈ ಬಗ್ಗೆ ಪೋಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಹೇಳಿಕೆಯ ಸದರಿ ಭಾಗಗಳನ್ನು ನಿಪಿ -7 ಮತ್ತು ನಿಪಿ -7(ಎ) ಎಂದು ಗುರುತಿಸಲಾಯಿತು.

ಆರೋಪಿತರು ಪ್ರಾ.ಸಾ-1 ಮತ್ತು ಚಾಸಾ-2 ರವರೊಂದಿಗೆ ಗಲಾಟೆ ಮಾಡಿದ್ದು ಅದನ್ನು ನಾನು ನೋಡಿದ್ದರೂ ಸಹ , ಪೋಲೀಸರಿಗೆ ನನ್ನ ಹೇಳಿಕೆ ನೀಡಿದ್ದರು ಸಹ ಆರೋಪಿತರು ನಮ್ಮ ಊರಿನವರಾಗಿರುವುದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಆರೋಪಿತರ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀಸವಾಲಿಗೆ ಸಮಯ ನೀಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಪ್ರಕಾರ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಣಗೊಳಿಸಲಾಯಿತು)

ಓ ಹೇ ಕೇ ಸ ಇದೆ

5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಶಿವಮೊಗ್ಗ (ಪೀಠಾಸೀನ, ಸಾಗರ).